ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಆಯುಕ್ತರ ಕಚೇರಿ, ವಾರ್ತಾ ಸೌಧ,
ನಂ.17, ಭಗವಾನ್ ಮಹಾವೀರ ರಸ್ತೆ(ಇನ್ಫೆಂಟ್ರಿ ರೋಡ್) ಬೆಂಗಳೂರು-560 001 ದೂರವಾಣಿ ಸಂ.080-22028041

ಸಂ:ವಾಸಾಸಂಇ/ಸುಮಪ/ಪ.ಪ್ರ/2019-20 ದಿನಾಂಕ: 01-04-2020

**ಪತ್ರಿಕಾ ಪ್ರಕಟಣೆ**

# ಹಂಗರ್ ಹೆಲ್ಪ್‌ಲೈನ್ ಗೆ ಕಾರ್ಮಿಕ ಸಚಿವರ ಭೇಟಿ, ಪರಿಶೀಲನೆ

**ಬೆಂಗಳೂರು, ಏಪ್ರಿಲ್ 1 ( ಕರ್ನಾಟಕ ವಾರ್ತೆ ) :**

**ಕೋವಿಡ್-19 ಸೋಂಕು ವ್ಯಾಪಿಸದಂತೆ ಇಡೀ ರಾಷ್ಟ್ರವೇ ಲಾಕ್ ಡೌನ್ ಆಗಿರುವ ಈ ಸಂದರ್ಭದಲ್ಲಿ ರಾಜ್ಯದ ರಾಜಧಾನಿಯಲ್ಲಿ ಒಂದೆಡೆ ಉದ್ಯೋಗವೂ ಇಲ್ಲದೆ ಮತ್ತೊಂದೆಡೆ ಕೂಲಿಯೂ ಇಲ್ಲದೆ, ಮಗದೊಂದೆಡೆ ಊಟವೂ ಇಲ್ಲದೆ ಬದುಕುತ್ತಿರುವ ಕೂಲಿ ಕಾರ್ಮಿಕರು, ವಿಶೇಷವಾಗಿ ವಲಸೆ ಕಾರ್ಮಿಕರಿಗೆ, ಊಟವನ್ನು ಸರಬರಾಜು ಮಾಡುವ ರಾಜ್ಯ ಕಾರ್ಮಿಕ ಇಲಾಖೆಯ ಹಂಗರ್ ಹೆಲ್ಪ್‌ಲೈನ್ ( ಹಸಿವು ಸಹಾಯವಾಣಿ ) ಕೊಠಡಿಗೆ ಕಾರ್ಮಿಕ ಸಚಿವ ಅರೆಬೈಲ್ ಶಿವರಾಮ ಹೆಬ್ಬಾರ್ ಅವರು ಇಲ್ಲಿ ಇಂದು ಭೇಟಿ ನೀಡಿ ಪರಿಶೀಲಿಸಿದರು.**

**ಹಂಗರ್ ಹೆಲ್ಪ್‌ಲೈನ್ 155214 !**

**ಕಾರ್ಮಿಕ ಇಲಾಖೆಯ ಈ ಸರ್ವ ವ್ಯಾಪೀ ಹಾಗೂ ಸರ್ವ ಸ್ಪರ್ಶೀ ಪ್ರಯತ್ನ ಬಹುಶಃ ರಾಷ್ಟ್ರದಲ್ಲೇ ಪ್ರಪ್ರಥಮ. ಈ ಪ್ರಯತ್ನಕ್ಕೆ ಜನಪ್ರತಿನಿಧಿಗಳೂ ಒಳಗೊಂಡಂತೆ ಎಲ್ಲರೂ ಕೈಜೋಡಿಸುವ ಅವಾಶ್ಯಕತೆ ಇದೆ. ಅನ್ನವಿಲ್ಲದ ಬಡ ಕೂಲಿ ಕಾರ್ಮಿಕರ ಹಸಿವು ಇಂಗಿಸಲು ಕಾರ್ಮಿಕ ಇಲಾಖೆ ಶುಲ್ಕ-ರಹಿತ ದೂರವಾಣಿಯನ್ನು ಸ್ಥಾಪಿಸಿದೆ. ಬಡ ಕೂಲಿ ಕಾರ್ಮಿಕರು ಅಥವಾ ವಲಸೆ ಬಂದಿರುವ ಕಾರ್ಮಿಕರು ಯಾರೇ ಇರಲಿ ಕಾರ್ಮಿಕ ಇಲಾಖೆಯ ಹಂಗರ್ ಹೆಲ್ಪ್‌ಲೈನ್ ( ಹಸಿವು ಸಹಾಯವಾಣಿ ) : 155214 ಕರೆ ಮಾಡಿದಲ್ಲಿ ಊಟ ಒದಗಿಸುವ ವ್ಯವಸ್ಥೆ ಮಾಡಲಾಗುತ್ತದೆ.**

**ಅಷ್ಟೇ ಅಲ್ಲ ! ಹಸಿವಿನಿಂದ ಬಳಲುತ್ತಿರುವವರನ್ನು ಯಾರೇ ಗಮನಿಸಿದರೂ, ಅವರೂ ಕೂಡಾ ಕಾರ್ಮಿಕ ಇಲಾಖೆಯ ಹಸಿವು ಸಹಾಯವಾಣಿ : 155214 ಸಂಪರ್ಕಿಸಿ ಮಾಹಿತಿ ನೀಡಿ, ಅವರನ್ನು ಹಸಿವಿನ ನೋವಿನಿಂದ ದೂರಮಾಡಬಹುದಾಗಿದೆ ಎಂದು ಸಚಿವರು ವಿವರಿಸಿದರು.**

**ಹಂಗರ್ ಹೆಲ್ಪ್‌ಲೈನ್ ಅಂದರೇನು ?**

**ಅನ್ನವಿಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ಕೂಲಿಕಾರರು ಸಹಾಯವಾಣಿಗೆ ಕರೆ ಮಾಡಿದಲ್ಲಿ ಅವರು ಎಲ್ಲಿಂದ ಕರೆ ಮಾಡಿದ್ದಾರೆ ? ಎಂಬುದನ್ನು ದೃಢಪಡಿಸಿಕೊಂಡು, ಅಲ್ಲಿ ಎಷ್ಟು ಜನರಿದ್ದಾರೆ ? ಅವರಿಗೆ ಅಗತ್ಯವಿರುವ ಊಟದ ಪ್ರಮಾಣ ಎಷ್ಟು ?**

ಎಂಬ ಅಂಶಗಳನ್ನು ಸಂಗ್ರಹಿಸಿ, ಅವರು ಇದ್ದಲ್ಲೇ ಅಥವಾ ಅವರಿಗೆ ಆಶ್ರವೂ ಇಲ್ಲದಿದ್ದಲ್ಲಿ ಸಮೀಪದ ಕಲ್ಯಾಣ ಮಂಟಪ ಅಥವಾ ಛತ್ರದಲ್ಲಿ ತಂಗಲು ಅನುವುಮಾಡಿಕೊಟ್ಟು ಊಟದ ವ್ಯವಸ್ಥೆ ಮಾಡಲು ಈ ಸಹಾಯವಾಣಿ ನೆರವು ಒದಗಿಸಲಿದೆ. ಈ ಹೆಲ್ಪಲೈನ್ ಜೊತೆಗೆ ತಮ್ಮ ಇಲಾಖೆಯಲ್ಲಿ ಈಗಾಗಲೇ ನೋಂದಾಯಿತ ಮಾಜಿ ಯೋಧರು, ಗೃಹ ರಕ್ಷಕರು, ನಾಗರೀಕ ರಕ್ಷಕರು, ಸರ್ಕಾರೇತರ ಸ್ವಯಂಸೇವಕರಿಗಾಗಿಯೇ ಪ್ರತ್ಯೇಕ ಮೊಬೈಲ್ ಆಪ್ ಸಿದ್ದಪಡಿಸಿರುವ ಕಾರ್ಮಿಕ ಇಲಾಖೆ ಸಂಕಷ್ಟದಲ್ಲಿ ಸಿಲುಕಿರುವ ಕೂಲಿಕಾರರು ನೆರವಿಗೆ ಧಾವಿಸಿದೆ.

ಮೊದಲು ರಾಜ್ಯದ ರಾಜಧಾನಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಂಟೂ ವಲಯಗಳಲ್ಲಿ ಚಾಲನೆಗೆ ಬಂದಿರುವ ಈ ಯೋಜನೆಗೆ ರಾಜ್ಯದ ಇತರೆ ಪ್ರಮುಖ ನಗರಗಳಿಗೂ ವಿಸ್ತರಿಸಲು ಯೋಜಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಪ್ರಸ್ತುತ ಎಂಬತ್ತು ಸಾವಿರ ಮಂದಿಗೆ ಊಟ ಸಿದ್ದಪಡಿಸಿ ವಿತರಣೆ ಮಾಡಲಾಗುತ್ತಿದೆ. ಸಧ್ಯದಲ್ಲಿಯೇ ಮೂರು ವಾರಗಳಿಗೆ ಆಗುವಷ್ಟು ದಿನಸಿ ಪೊಟ್ಟಣಗಳನ್ನು ತಯಾರಿಸಿ 85,000 ಮಂದಿಗೆ ವಿತರಿಸಲು ಕ್ರಮವಹಿಸಲಾಗುತ್ತಿದೆ. ಕಾರ್ಮಿಕ ಕಲ್ಯಾಣ ನಿಧಿಯಿಂದ 156.50 ಕೋಟಿ ರೂ ಅನುದಾನವನ್ನು ಬಿಡುಗಡೆ ಮಾಡಿ ತಲಾ ಒಂದು ಸಾವಿರ ರೂಪಾಯಿಗಳಂತೆ 15.65 ಲಕ್ಷ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಹಣವನ್ನು ನೇರವಾಗಿ ಪಾವತಿಸಲಾಗಿದೆ ಎಂದು ಶಿವರಾಮ ಹೆಬ್ಬಾರ್ ಅವರು ತಿಳಿಸಿದರು.

ಕಾರ್ಮಿಕರಿಗೆ ಊಟ ಒದಗಿಸುವ ಈ ಕಾರ್ಯಕ್ರಮಕ್ಕೆ ಚಾಲನೆ ನೀಡುವಲ್ಲಿ ಸ್ವಲ್ಪ ವಿಳಂಬವಾಗಿರಬಹುದು. ಬೃಹತ್ ಪ್ರಮಾಣದ ಸಿದ್ಧತೆಗಳಿಗೆ ಕಾಲಾವಕಾಶದ ಅಗತ್ಯವಾಗಿತ್ತು ಎಂಬುದನ್ನು ಎಲ್ಲರೂ ಮನಗಾಣಬೇಕು. ಅಲ್ಪ-ಸ್ವಲ್ಪ ಲೋಪ-ದೋಶಗಳಿದ್ದಲ್ಲಿ ಕ್ಷಮಿಸಿ ಬಿಡಿ. ಇಲ್ಲವಾದಲ್ಲಿ ತಮ್ಮ ಗಮನಕ್ಕೆ ತನ್ನಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ ಸಚಿವರು ಯಾವುದೇ ಕಾರಣಕ್ಕೂ ಸಣ್ಣ ವಿಷಯವನ್ನು ದೊಡ್ಡದು ಮಾಡಿ ಹಸಿದ ಕೂಲಿ ಕಾರ್ಮಿಕರಿಗೆ ಅನ್ಯಾಯ ಮಾಡಬಾರದು. ಅಂತೆಯೇ, ಸ್ವಯಂಸೇವಕರ ಉತ್ಸಾಹಕ್ಕೆ ಧಕ್ಕೆ ಉಂಟು ಮಾಡಬಾರದು ಎಂದು ಮನವಿ ಮಾಡಿದರು.

ಕಾರ್ಮಿಕ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಕ್ಯಾಪ್ಟನ್ ಪಿ. ಮಣಿವಣ್ಣನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಸ್ ಎನ್ ಸಿದ್ದರಾಮಪ್ಪ ಅವರೂ ಈ ಸಂದರ್ಭದಲ್ಲಿ ಹಾಜರಿದ್ದರು.

**********

ಡಿ ಪಿ ಎಂ

## ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ಬೆಂಗಳೂರು, 01 ಏಪ್ರಿಲ್ 2020 (ಕರ್ನಾಟಕ ವಾರ್ತೆ): ಕರ್ನಾಟಕ ಲೋಕಸೇವಾ ಆಯೋಗವು 2019-20 ನೇ ಸಾಲಿನ ವಿವಿಧ ಇಲಾಖೆಗಳಲ್ಲಿನ ಕಿರಿಯ ಸಹಾಯಕರು/ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ: 29-02-2020 ರಂದು ಹೊರಡಿಸಲಾದ

ಅಧಿಸೂಚನೆಗಳಲ್ಲಿ ಅರ್ಜಿ ಸಲ್ಲಿಸುವ ಇದೇ ಏಪ್ರಿಲ್ 09 ರಂದು ಕೊನೆಯ ದಿನ ಇದೆ ಮತ್ತು ಶುಲ್ಕ ಪಾವತಿಸುವ ಕೊನೆಯ ದಿನಾಂಕ:13–04–2020 ಎಂದು ನಿಗದಿಪಡಿಸಲಾಗಿತ್ತು.

ಆದರೆ, ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್–19) ವೈರಾಣು ಹರಡುವಿಕೆಯನ್ನು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ರಾಜ್ಯ ಸರ್ಕಾರವು ಹೊರಡಿಸಿರುವ ವಿವಿಧ ಆದೇಶಗಳನ್ವಯ, ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ: 30–04–2020 ರವರೆಗೆ ಮತ್ತು ಶುಲ್ಕ ಪಾವತಿಸಲು ದಿನಾಂಕ 02–05–2020 ರವರೆಗೆ ವಿಸ್ತರಿಸಲಾಗಿದೆ ಎಂದು ಆಯೋಗದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಯಂ ವೈದ್ಯಕೀಯ ಪರೀಕ್ಷೆಗೆ ಬರಲು ಮನವಿ

ಬೆಂಗಳೂರು, 01 ಏಪ್ರಿಲ್ 2020 (ಕರ್ನಾಟಕ ವಾರ್ತೆ): ಕರ್ನಾಟಕ ವಿವಿಧ ಭಾಗಗಲ್ಲಿ ತಾತ್ಕಾಲಿಕವಾಗಿ ತಂಗಿರುವ ತಬ್ಲೀಕ್ ಜಮಾತ್ ನ 50 ವಿದೇಶಿ ಸದಸ್ಯರುಗಳನ್ನು ಮುನ್ನೆಚ್ಚರಿಕಾ ಕ್ರಮವಾಗಿ ಅವರು ಇರುವ ಸ್ಥಳದಲ್ಲಿ Quarantine ಮಾಡಲಾಗಿದೆ. ಇವರಲ್ಲಿ 19 ಮಂದಿ ಕಿರ್ಗಿಸ್ತಾನ್, 20 ಮಂದಿ ಇಂಡೋನೇಷ್ಯಾ, 4 ಮಂದಿ ದಕ್ಷಿಣ ಆಫ್ರಿಕಾ, 3 ಮಂದಿ ಗ್ಯಾಂಬಿಯಾ ಹಾಗೂ ಅಮೇರಿಕಾ, ಯುನೈಟೆಡ್ ಕಿಂಗ್‌ಡಮ್, ಫ್ರಾನ್ಸ್ ಮತ್ತು ಕೀನ್ಯಾ ದೇಶದ ತಲಾ ಒಂದು ಒಳಗೊಂಡಿರುತ್ತಾರೆ. ಇವರಲ್ಲಿ ಕೆಲವರು ದೆಹಲಿಯ ನಿಜಾಮುದ್ದೀನ್‌ನಲ್ಲಿ ನಡೆದ ಮರ್ಕಾಜ್‌ಗೆ ಹಾಜರಾಗಿದ್ದಿರಬಹುದು.

ಅಲ್ಲದೆ, ದೆಹಲಿಯ ನಿಜಾಮುದೀನ್ ನಲ್ಲಿ ನಡೆದ ಮರ್ಕಾಜ್ ಗೆ ಹಾಜರಾಗಿದ್ದ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಸೇರಿದ ಸುಮಾರು 300 ನಿವಾಸಿಗಳನ್ನು ಸಹ Quarantine ಮಾಡಲಾಗುತ್ತಿದ್ದು, ಅವರನ್ನು ವೈದ್ಯಕೀಯ ತಪಾಸಣೆಗೂ ಸಹ ಒಳಪಡಿಸಲಾಗುತ್ತಿದೆ.

ಮಾರ್ಚ್ ತಿಂಗಳ ಮಧ್ಯದಲ್ಲಿ ದೆಹಲಿಯ ನಿಜಾಮುದ್ದೀನ್‌ನಲ್ಲಿ ನಡೆದ ಮರ್ಕಾಜ್‌ಗೆ ಹಾಜರಾಗಿದ್ದ ಕರ್ನಾಟಕ ರಾಜ್ಯದ ಇತರ ನಿವಾಸಿಗಳಿಗೆ ನಾವು ಸ್ವಯಂಪ್ರೇರಣೆಯಿಂದ ವ್ಯಾಪಕ ವೈದ್ಯಕೀಯ ಪರೀಕ್ಷೆಗೆ ಬರಲು ಮನವಿ ಮಾಡಲಾಗಿದೆ ಪೊಲೀಸ್ ಡಿಜಿ & ಐಜಿ ಇವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

## ನೇರ ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು, 01 ಏಪ್ರಿಲ್ 2020 (ಕರ್ನಾಟಕ ವಾರ್ತೆ): ಬೆಂಗಳೂರು ಜಲಮಂಡಳಿ **ದಿನಾಂಕ**:**04.04.2020 ರ** ಶನಿವಾರದಂದು ಬೆಳಗ್ಗೆ ೦೯:೦೦ ರಿಂದ ೧೦:೩೦ ರವರೆಗೆ ತುಷಾರ್ ಗಿರಿನಾಥ್, ಭಾ.ಆ.ಸೇ., ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಇವರೊಂದಿಗೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಸಂಬಂಧ ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಫೋನ್–ಇನ್ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; **080-22945119.**

## Phone in Program

BWSSB is conducting a Phone-in program with Sri Tushar Giri nath, I.A.S., Chairman, BWSSB on **04.04.2020** Saturday from 09:00 am to 10:30 am.. So we are here by requesting the public to discuss and redressal the grievances concerned with the Water Billing, Manhole Overflowing, Meter Reading issues, Improper Water Supply and Sanitary issues.

It is requested to Consumers to give the R.R.Number details before raising complaint. Public can contact through the phone number:**080-22945119**.